◆ ಮನುಷ್ಯ ಸಂಬಂಧಗಳಲ್ಲಿ ಕಾವ್ಯದ ಪಾತ್ರ ಎಂಥದ್ದು?

ಸಂಬಂಧ ಎಂದು ಹೇಳುತ್ತಿರುವಾಗಲೇ ಅಲ್ಲಿ ಕನಿಷ್ಠ ಇಬ್ಬರು ವ್ಯಕ್ತಿಗಳಾದರೂ ಇರಲೇಬೇಕು ಅಲ್ಲವೇ? ಆ ಇಬ್ಬರಿಗೂ ಕಾವ್ಯದಲ್ಲಿ ಆಸಕ್ತಿ ಇದ್ದಾಗ ಮಾತ್ರ ಅವರ ಸಂಬಂಧದಲ್ಲಿ ಕಾವ್ಯ ಏನಾದರೂ ಪಾತ್ರ ವಹಿಸಬಹುದು. ಇಲ್ಲದೆ ಹೋದರೆ ಸಂಬಂಧದಲ್ಲಿ ಕಾವ್ಯಕ್ಕೆ ಸ್ಥಾನ ಇರುವುದಿಲ್ಲ. ಆಸಕ್ತಿ ಇಲ್ಲದವರಿಗೆ ಕಾವ್ಯ ಯಾವತ್ತೂ ಕಿರಿಕಿರಿ ಹುಟ್ಟಿಸುತ್ತದಷ್ಟೆ. ಯಾಕೆಂದರೆ ಯಾರೂ ನಮ್ಮ ಸಹವರ್ತಿಗಳ ಜತೆಯಲ್ಲಿ ಕಾವ್ಯದ ಮೂಲಕ ಸಂವಹನ ಮಾಡುತ್ತಿರುವುದಿಲ್ಲ. ಬರೆಯಬೇಕು ಎಂದರೂ ಗದ್ಯವನ್ನು ಅವಲಂಬಿಸುವವರೇ ಹೆಚ್ಚು.

◆ ಜಾನ್ ನಿಸಾರ್ ಅಖ್ತರ್ ಮತ್ತು ಕೈಫಿ ಅಜ್ಮಿ ಅವರ ಕಾವ್ಯಗಳನ್ನು ಸಂಗ್ರಹಿಸುವಾಗ ನೀವು ಎದುರಿಸಿದ ಸವಾಲುಗಳೇನು?

ಸಂಗ್ರಹಿಸಿದ್ದೇವೆ ಎಂದು ಹೇಳುವುದು ಅಷ್ಟೊಂದು ಸರಿಯಲ್ಲವೇನೋ. ಯಾಕೆಂದರೆ ನಾವು ಎಲ್ಲೆಲ್ಲಿಯೋ ಅಲೆದಾಡಿ ಸಂಗ್ರಹಿಸಿದ್ದೇವೆ ಎನ್ನಲಿಕ್ಕೆ ಆ ಪದ್ಯಗಳೇನೂ ಕಳೆದುಹೋಗಿರಲಿಲ್ಲ. ಈ ಪುಸ್ತಕದಲ್ಲಿ ಜಾನ್ ನಿಸಾರ್ ಅಖ್ತರ್ ಅವರ 25 ಕವಿತೆಗಳು ಮತ್ತು ಕೈಫಿ ಅಜ್ಮಿ ಅವರ 25 ಕವಿತೆಗಳು ಇವೆ. ಆದರೆ ಅವರಿಬ್ಬರೂ ಸಾಕಷ್ಟು ಕಾವ್ಯ ರಚಿಸಿದ್ದಾರೆ. ಅವುಗಳಲ್ಲಿ ಕೇವಲ 25 ಕವಿತೆಗಳನ್ನು ಆಯ್ಕೆಮಾಡಿ ಸಂಗ್ರಹಿಸುವುದು ಸವಾಲಿನ ಕೆಲಸವೇ ಆಗಿತ್ತು. ನಾವು ಆಯ್ಕೆ ಮಾಡಿರುವುದೇ ಅವರ ಶ್ರೇಷ್ಠ ಪದ್ಯಗಳು ಎಂದೂ ಅಲ್ಲ. ಅವರ ಕಾವ್ಯ ವಿಸ್ತಾರದ ಬಹುತೇಕ ಎಲ್ಲ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾತಿನಿಧಿಕ ಅನಿಸುವಂಥ ಕೆಲವು ಪದ್ಯಗಳನ್ನು ಆಯ್ದುಕೊಂಡಿದ್ದೇವಷ್ಟೆ.

ಗಜಲ್‌ಗಳು ಇಂಗ್ಲಿಷ್ ಭಾಷಾಂತರಕ್ಕೆ ಅಷ್ಟಾಗಿ ಒಗ್ಗುವುದಿಲ್ಲ. ಹಾಗಾಗಿ, ಇಬ್ಬರ ಗಜಲ್‌ಗಳನ್ನು ಪುಸ್ತಕದಲ್ಲಿ ಸೇರಿಸುವುದು ಬೇಡ ಎಂದು ತೀರ್ಮಾನಿಸಿದ್ದೆವು. ಇದು ಕಠಿಣ ತೀರ್ಮಾನ.

◆ ನೀವು ಮತ್ತು ಶಬಾನಾ ಅಜ್ಮಿ ಇಬ್ಬರೂ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದೀರಿ. ಒಟ್ಟಿಗೇ ಸೇರಿ ಸಿನಿಮಾ ಮಾಡುವ ಆಲೋಚನೆ ಇದೆಯೇ?

ಮಾಡಬಾರದು ಎಂದೇನಿಲ್ಲ. ನಾವಿಬ್ಬರೂ ರಂಗಭೂಮಿಯಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ಕೈಫಿ ಬದುಕನ್ನು ಆಧರಿಸಿದ ನಾಟಕವೊಂದರಲ್ಲಿ ನಾನು ಕೈಫಿ ಆಗಿ ಶಬಾನಾ, ಶೌಕತ್ ಆಗಿ ನಟಿಸಿದ್ದೇವೆ. ಕೈಫಿ ಅವರ ಜನ್ಮಶತಮಾನೋತ್ಸವ ಆಚರಣೆಗಾಗಿ ರೂಪಿಸಿದ 'ರಾಗ್ ಶಾಯರಿ' ಎಂಬ ಸಂಗೀತ ಕಾರ್ಯಕ್ರಮದಲ್ಲಿಯೂ ಒಟ್ಟಿಗೆ ಕೆಲಸ ಮಾಡಿದ್ದೇವೆ. ಕೈಫಿ ಅವರ ಶಾಯರಿಗಳನ್ನು ಆಧರಿಸಿದ ಸಂಗೀತ ಕಾರ್ಯಕ್ರಮವಿದು. ತಬಲಾ ಮಾಸ್ಟರ್ ಝಾಕಿರ್ ಹುಸೇನ್, ಗಾಯಕ ಶಂಕರ್ ಮಹಾದೇವನ್, ನಿರ್ದೇಶಕ ಫಿರೋಜ್ ಅಬ್ಬಾಸ್ ಖಾನ್ ಅವರೂ ಈ ಕಾರ್ಯಕ್ರಮದ ಭಾಗವಾಗಿದ್ದಾರೆ. ಮುಂದೆಯೂ ಅವಕಾಶ ಸಿಕ್ಕರೆ ಮಾಡಿಯೇ ಮಾಡುತ್ತೇವೆ.

◆ 'ಮೀ ಟೂ' ಅಭಿಯಾನದ ಕುರಿತು ನಿಮ್ಮ ಅಭಿಪ್ರಾಯವೇನು?

ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ತುಂಬ ಗಂಭೀರವಾದ ಸಮಸ್ಯೆ. ಇದು ನಿನ್ನೆ ಮೊನ್ನೆ ಶುರುವಾಗಿದ್ದೂ ಅಲ್ಲ. ಹಲವು ದಶಕಗಳಿಂದ ನಡೆದುಕೊಂಡು ಬಂದಿರುವ ಅನಿಷ್ಟವಿದು. ಈಗ ಅದರ ಕುರಿತು ಕೆಲವರು ಮೌನ



## ನೋವು ಮತ್ತು ಮರೆವು!

ನೋವು ನನಗೊಬ್ಬನಿಗೆ ಸಂಬಂಧಿಸಿದ್ದಾದರೆ ಮರೆತುಬಿಡುವುದು ಸರಿ. ಆದರೆ ಅದೇ ನೋವು ನನ್ನ ಸಮಾಜಕ್ಕೆ ಸಂಬಂಧಿಸಿದ್ದಾದರೆ, ಮನುಷ್ಯ ಸಮುದಾಯಕ್ಕೆ ಸಂಬಂಧಿಸಿದ್ದಾದರೆ, ಜಗತ್ತಿಗೆ ಸಂಬಂಧಿಸಿದ್ದಾದರೆ, ಸಮಾಜದಲ್ಲಿನ ಅನ್ಯಾಯ ಮತ್ತು ಅಸಮಾನತೆಗಳಿಗೆ ಸಂಬಂಧಿಸಿದ್ದಾದರೆ ಅದನ್ನು ಮರೆಯುವುದು ಖಂಡಿತ ಸರಿಯಲ್ಲ. ಆ ನೋವನ್ನು ನಾವು ಸದಾ ನೆನಪಿನಲ್ಲಿಯೇ ಇಟ್ಟುಕೊಳ್ಳಬೇಕು. ಒಂದೊಮ್ಮೆ ಅಂಥ ನೋವುಗಳನ್ನೂ ನೀವು ಮರೆತುಬಿಟ್ಟಿರಿ ಎಂದಾದರೆ ನಿಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಆಗುತ್ತಿರುವ ಸಂಗತಿಗಳಿಗೂ ನಿಮಗೆ ಸಂಬಂಧವೇ ಇಲ್ಲದ ಹಾಗೆ ನಿಮ್ಮದೇ ಜಗತ್ತಿನೊಳಗೆ ಬಚ್ಚಿಟ್ಟುಕೊಂಡು ನೆಮ್ಮದಿಯಾಗಿದ್ದೀರಿ ಎಂದರ್ಥ. ಹಾಗೆ ತನ್ನೊಬ್ಬನ ನೆಮ್ಮದಿಯನ್ನು ಹುಡುಕಿಕೊಂಡು ತನ್ನಷ್ಟಕ್ಕೆ ಇರುವುದು ಖಂಡಿತವಾಗಿಯೂ ಪ್ರಜ್ಞಾವಂತನ ಲಕ್ಷಣ ಅಲ್ಲ.

ಮುರಿಯುತ್ತಿದ್ದಾರೆ. ತಮಗಾದ ಅನುಭವವನ್ನು ಧೈರ್ಯದಿಂದ ಹೇಳಿಕೊಳ್ಳುತ್ತಿದ್ದಾರೆ. 'ಮೀ ಟೂ' ಅಭಿಯಾನದ ಮೂಲಕ ಹೆಣ್ಣುಮಕ್ಕಳು ಧ್ವನಿಯೆತ್ತುತ್ತಿರುವುದು ಖಂಡಿತ ಸ್ವಾಗತಾರ್ಹ.

ಪ್ರತಿ ಚಳವಳಿ ಅಥವಾ ಬದಲಾವಣೆ ಕೆಲವು ಹಾನಿಗಳನ್ನೂ ತನ್ನೊಳಗೆ ಇರಿಸಿಕೊಂಡೇ ಬರುತ್ತದೆ. ಆ ಹಾನಿಯನ್ನೇ ಗಮನದಲ್ಲಿಟ್ಟುಕೊಂಡು ಬದಲಾವಣೆಯೇ ಆಗಬಾರದು ಎಂದು ಅಪ್ಪಣೆ ಹೊರಡಿಸುವುದು ಸರಿಯಲ್ಲ. ಮೀ ಟೂ ಅಭಿಯಾನದಲ್ಲಿಯೂ ಕೆಲವು ಪ್ರಕರಣಗಳನ್ನು ಕೋರ್ಟ್‌ನಲ್ಲಿ ಸಾಬೀತುಗೊಳಿಸಲು ಸಾಧ್ಯವಾಗದೇ ಹೋಗಬಹುದು. ಹಾಗೆಂದು ಆ ಅಭಿಯಾನದಲ್ಲಿ ಇರುವವರೆಲ್ಲ ಸುಳ್ಳುಗಾರರು ಅವಕಾಶವಾದಿಗಳು ಎಂದು ಹೇಳುವುದು ಸಮ್ಮತವಲ್ಲ. ಮಹಿಳೆಯ ಮೇಲೆ ನಡೆಯುವ ದೌರ್ಜನ್ಯಗಳಿಗೆ ಎಲ್ಲ ಸಮಯದಲ್ಲಿಯೂ ಪುರಾವೆಗಳು ಇರುವುದಿಲ್ಲ. ಆದರೆ ಮಹಿಳೆಯರು ಸಾರ್ವಜನಿಕ ವೇದಿಕೆಗಳಲ್ಲಿ ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಮಾತನಾಡುತ್ತಿರುವುದು ಒಂದಿಷ್ಟು ಜನರ ಮನಸಲ್ಲಂತೂ ಭಯ ಹುಟ್ಟಿಸಿದೆ. ನಾನಂತೂ ಈ ಅಭಿಯಾನವನ್ನು ಬೆಂಬಲಿಸುತ್ತೇನೆ.

◆ ನಿಮ್ಮ ತಂದೆಯವರೂ ಶಾಯರಿ ಬರೆಯುತ್ತಿದ್ದರು. ನೀವೂ ಆ ಪರಂಪರೆ ಮುಂದುವರಿಸಿಕೊಂಡು ಬಂದಿದ್ದೀರಿ. ನಿಮ್ಮ ಮಕ್ಕಳಾದ ಜೋಯಾ ಮತ್ತು ಫರ್ಹಾನ್ ಅವರಿಗೆ ಕಾವ್ಯದ ಕುರಿತು ಒಲವು ಇದೆಯೇ?

ಇಬ್ಬರೂ ಪದ್ಯ ಬರೆಯುತ್ತಾರೆ. ಫರ್ಹಾನ್ ಗಾಯನದಲ್ಲಿಯೂ ತೊಡಗಿಕೊಂಡಿದ್ದಾನೆ. ಜೋಯಾ ಶಾಯರಿ ಬರೆಯುತ್ತಾಳೆ ಎನ್ನುವುದು ನನಗೆ ಗೊತ್ತು. ಆದರೆ ಅವಳು ಎಂದಿಗೂ ನನ್ನ ಬಳಿ ಹೇಳಿಕೊಂಡಿಲ್ಲ. ಬರೆದ ಪದ್ಯಗಳನ್ನು ತೋರಿಸುವಂತೆ ನಾನು ಹಲವು ಸಲ ಕೇಳಿರುವೆ. ಆದರೆ ಇದುವರೆಗೆ ಅವಳ ಪದ್ಯ ಓದುವ ಅದೃಷ್ಟ ನನಗೆ ಸಿಕ್ಕಿಲ್ಲ.

◆ ನಟನೆಯಿಂದ ಗಳಿಸಿದ ಜನಪ್ರಿಯತೆ ಬಳಸಿಕೊಂಡು ರಾಜಕೀಯಕ್ಕೆ ಇಳಿಯುವ, ಚುನಾವಣೆಗೆ ನಿಲ್ಲುವ ಕಲಾವಿದರ ಬಗ್ಗೆ ನಿಮ್ಮ ಅಭಿಪ್ರಾಯ ?

ರಾಜಕೀಯದಲ್ಲಿ ಅವರ ಭವಿಷ್ಯ ಏನಾಗುತ್ತದೆ ಎನ್ನುವುದು ಅವರು ಪ್ರತಿನಿಧಿಸುವ ಪಕ್ಷ, ಚುನಾವಣೆಗೆ ನಿಲ್ಲುವ ಕ್ಷೇತ್ರ, ಅವರ ರಾಜಕೀಯ ನಿಲುವುಗಳು ಹೀಗೆ ಹಲವು ಅಂಶಗಳನ್ನು ಅವಲಂಬಿಸಿರುತ್ತದೆ. ಸಿನಿಮಾ ನಟರು ರಾಜಕೀಯಕ್ಕೆ ಬರಬಾರದು ಎನ್ನುವುದು ಸರಿಯಲ್ಲ. ಯಾಕೆಂದರೆ ಭಾರತದ ಯಾವುದೇ ಪ್ರಜೆಗೆ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಲು, ಚುನಾವಣೆಗೆ ನಿಲ್ಲಲು ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಒಬ್ಬ ಸಿನಿಮಾ ನಟನಿಗೂ ಇರುತ್ತದೆ. ಅವರು ಮೊದಲು ಭಾರತದ ಪ್ರಜೆಗಳಾಗಿರುತ್ತಾರೆ. ನಂತರ ಸಿನಿಮಾ ನಟ, ನಿರ್ಮಾಪಕ, ನಿರ್ದೇಶಕ ಏನಿದ್ದರೂ...